Volume: 1 Issue: 12 Pages: 31-33
International Journal of Research in Academic World
E-ISSN: 2583-1615
Impact Factor: 4.714
Received: 19/July/2022 Int. J Res. Acad. World. 2022; 1(12):31-33 Accepted: 24/August/2022

# ಆಕರಗಳಾಗಿ ಅಲೆಮಾರಿ ಸಮುದಾಯಗಳ ಸಾಂಸ್ಕೃತಿಕ ನೈಪುಣ್ಯತೆ

*[1]ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ

*[1]ಸಹ ಪ್ರಾಧ್ಯಾಪಕರು ಎಸ್.ಎಮ್.ಭಂಡಾರಿ ಮತ್ತುರಾಟಿ ಪದವಿ ಮಹಾವಿದ್ಯಾಲಯ ಗುಳೇದಗುಡ್ಡ, ಬಾಗಲಕೋಟೆ ಜಿಲ್ಲೆ, ಕರ್ನಾಟಕ, ಭಾರತ

**Abstract**

ವಿಳಾಸವಿಲ್ಲದ ಅಲೆಮಾರಿಗಳ ಐಡೆಂಟಿಟಿ ಯ ಪ್ರಶ್ನೆಜಟ್ಟಿಲವಾಗಿ ಕಾಡಿದ್ದರಿಂದ ತಮ್ಮ ಅಸ್ತಿತ್ವಕ್ಕಾಗಿ ಮೂರು ಜನ ಅಲೆಮಾರಿ ಚಿಂತಕರಿಗೆ ತಮ್ಮ ಬದುಕಿನ ಸ್ಥಿತ್ಯಂತರಗಳನ್ನುಮನದೆರೆದು ಹಂಚಿಕೊಂಡರು. ಅಲೆಮಾರಿ ಕುರುಬ: ಈ ಸಮುದಾಯ ಅಲೆಮಾರಿ ಕುರುಬರು ಕರ್ನಾಟಕದಲ್ಲಿನೆಲೆಕಂಡುಕೊಂಡಿರುವ ಇವರ ಮೂಲತಃ ಅಲೆಮಾರಿ ಕುರುಬರು. ಇವರು ಅಲ್ಪಸಂಖ್ಯಾತರಾಗಿರುತ್ತಾರೆ. ಪಾರಂಪರಿಕ ಕುರಿ ಮೇಕೆ ಗಳನ್ನುಪಾಲನೆ ಮಾಡುವ ಕಾಯಕ ರೂಢಿಸಿಕೊಂಡಿದ್ದಾರೆ. ಬುಡ್ಗಜಂಗಮ: ಪರಿಶಿಷ್ಟ ಜಾತಿಯ ಬುಡ್ಗಜಂಮರು ಆಂಧ್ರದ ಮೂಲದವರಾಗಿದ್ದುಕರ್ನಾಟಕ ಮಹಾರಾಷ್ಟ್ರ, ಆಂಧ್ರಗಳಲ್ಲಿಲಕ್ಷಾಂತರ ಜನರು ವಾಸವಾಗಿದ್ದಾರೆ. ಹಕ್ಕಿಪಿಕ್ಕಿಇದು ಪಾರ್ದಿಸಮುದಾಯದ ಭಾಗವಾದರು, ಕರ್ನಾಟಕದಲ್ಲಿವಿಶೇಷವಾಗಿ ಗುರುತಿಸಿಕೊಂಡಿರುವ ಸಮುದಾಯವಾಗಿದೆ. ಗುಜರಾತ್ ಮೂಲದವರು ವಾಗರೇಇವರ ಮಾತೃ ಭಾಷೆ.

**Keywords:** ಮಾ.ಚೆ:-ಮಾದಾರ ಚೆನ್ನಯ್ಯ ನೆ.ಮೂ.ಸಂ:-ನೆಲ ಮೂಲ ಸಂಸ್ಕೃತಿಯ ಬು.ಜಂ:-ಬುಡ್ಗಜಂಗಮ ಹ.ಪಿ:-ಹಕ್ಕಿಪಿಕ್ಕಿ ಗಾ.ಪಾ:-ಗಾಯಪಾರದೀ

## Introduction

ನೆಲ ಮೂಲ ಸಂಸ್ಕೃತಿಯ ರೂಪಾಂತರವಾಗಿ ಕಾಣುತ್ತಿರುವ ಆಕರಗಳಲ್ಲಿ ಅಲೆಮಾರಿ ಸಮುದಾಯಗಳ ಪಾತ್ರ ಹಿರಿದಾದದು. ಇವರ ಸಂಖ್ಯೆ ಅಲೆಮಾರಿಗಳು, ಆದಿವಾಸಿಗಳು ವಿಶ್ವಸಂಸ್ಥೆಯ ವರದಿ ಪ್ರಕಾರ ಅಂದಾಜು ಶೇಕಡ 20ರಷ್ಟು ಜನರು ಆದಿವಾಸಿ ಅಲೆಮಾರಿಗಳಿದ್ದಾರೆ.

ಕರ್ನಾಟಕದಲ್ಲಿ 18ರಿಂದ 20 ಲಕ್ಷ ಜನರಿರಬಹುದು ಎಂದು ಅಂದಾಜಿಸಲಾಗಿದೆ. ಕರ್ನಾಟಕದಲ್ಲಿ 51 ಅಲೆಮಾರಿ ಸಮುದಾಯಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿದ್ದರೆ 23 ಸಮುದಾಯಗಳು ಪರಿಶಿಷ್ಟ ಪಂಗಡಪಟ್ಟಿಯಲ್ಲಿರುತ್ತವೆ. ಹಾಗೆಯೇ ಇತರ 46 ಸಮುದಾಯಗಳು ಓಬಿಸಿ ಪಟ್ಟಿಯಲ್ಲಿರುತ್ತವೆ. ಹೀಗೆ ಒಟ್ಟು 120 ಸಮುದಾಯಗಳು ಕರ್ನಾಟಕದಲ್ಲಿ ಇನ್ನೂ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಹೆಣಗುತ್ತಿರುವುದು ಕಂಡು ಬರುತ್ತದೆ.

2015-16 ನೇ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ,ಅರೆ ಅಲೆಮಾರಿ,ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ (ಸ ಕ ಇ 10 ಎಸ್ ಎ ಪಿ 2015 12/01/2016) ಅಲೆಮಾರಿ ಕೋಶವನ್ನು ರಚಿಸಿತು. ಸರ್ಕಾರಕ್ಕೆ ಇಂಥದೊಂದು ಹೊಸ ಚಿಂತನೆಗಳು ಮೊಳಗಲು ಹಂಪಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ.ಕೆ ಎಂ ಮೇತ್ರಿ ಅವರು ಅಲೆಮಾರಿ ಸಮುದಾಯಗಳ ವರದಿಯ ಪ್ರಾಜೆಕ್ಟ್ನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಂದಿನ ಅಧ್ಯಕ್ಷರಾದ ಪ್ರೊ ಎಸ್ ಜಿ ಸಿದ್ದರಾಮಯ್ಯ ಮತ್ತು ಅಲೆಮಾರಿ ಸಮುದಾಯಗಳ ಕನಸಿನ ಹರಿಕಾರ ಭಾಸ್ಕರ ದಾಸ ಎಕ್ಕಾರು ಈ ಮೂರು ಜನರು ಸರಣಿಗೆ ಶ್ರಮ.ಇದಕ್ಕೆ ಪ್ರೋತ್ಸಾಹದಾಯವಾಗಿ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾಗಿದ್ದ ಸಿ ಎಸ್ ದ್ವಾರಕನಾಥ್ ಅವರು ಸಾತ್ ನೀಡಿದರು.

ವಿಳಾಸವಿಲ್ಲದ ಅಲೆಮಾರಿಗಳ ಐಡೆಂಟಿಟಿ ಯ ಪ್ರಶ್ನೆ ಜಟ್ಟಿಲವಾಗಿ ಕಾಡಿದ್ದರಿಂದ ತಮ್ಮ ಅಸ್ತಿತ್ವಕ್ಕಾಗಿ ಮೂರು ಜನ ಅಲೆಮಾರಿ ಚಿಂತಕರಿಗೆ ತಮ್ಮ ಬದುಕಿನ ಸ್ಥಿತ್ಯಂತರಗಳನ್ನು ಮನದೆರೆದು ಹಂಚಿಕೊಂಡರು. ವಿಶೇಷ ಕಾರ್ಯಗಾರ ಸಮಾಲೋಚನ ಸಭೆ ಇಂತಹ ಅರಿವಿನ ಆಕರಗಳ ಮೂಲಕ ವಿನಿಮಯಗೊಂಡದ್ದು ಅವಿಸ್ಮರಣೀಯ. ಕರ್ನಾಟಕ ರಾಜ್ಯದಲ್ಲಿಯ ವಿಮುಕ್ತ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳನ್ನು ಮೀಸಲಾತಿ ಪಟ್ಟಿಗಳಲ್ಲಿ ಗುರುತಿಸಿ ವಿಭಿನ್ನವಾಗಿ ವಿಭಜಿಸಿರುವದು ಕಂಡು ಬರುತ್ತದೆ. ಆದರೆ ಕೇವಲ ಪಟ್ಟಿಗೆ ಸೀಮಿತವಾಗದೆ, ಅದಕ್ಕೆ ಸರಿಯಾದಂತಹ ರೂಪ ರೇಷೆಯನ್ನು ತಯಾರಿಸಲಿಲ್ಲ. ಅಭಿವೃದ್ಧಿ ಕಾಣದಂತೆ ಇಂದಿಗೂ ಸಹ ಅವು

ಅಲೆಮಾರಿ ಕುರುಬ: ಈ ಸಮುದಾಯ ಅಲೆಮಾರಿ ಕುರುಬರು ಕರ್ನಾಟಕದಲ್ಲಿ ನೆಲೆಕಂಡುಕೊಂಡಿರುವ ಇವರ ಮೂಲತಃ ಅಲೆಮಾರಿ ಕುರುಬರು. ಇವರು ಅಲ್ಪಸಂಖ್ಯಾತರಾಗಿರುತ್ತಾರೆ. ಪಾರಂಪರಿಕ ಕುರಿ ಮೇಕೆ ಗಳನ್ನು ಪಾಲನೆ ಮಾಡುವ ಕಾಯಕ ರೂಢಿಸಿಕೊಂಡಿದ್ದಾರೆ. ಹಾಗೆ ಬೆಳಗಾವಿ ಪ್ರದೇಶದಲ್ಲಿ ಅಲೆಮಾರಿ ಕುರುಬರು ಹೆಚ್ಚಿದ್ದಾರೆ. ಚಿತ್ರದುರ್ಗದಲ್ಲಿ ಕಾಡುಗೊಲ್ಲರೆಂದು, ಮ್ಯಾಸಬೇಡರೆಂದು, ಕುರಿಗಾಹಿಗಳಾಗಿ ಜೀವನ ನಡೆಸುವರು. ಅಲೆಮಾರಿ ಕುರಬರು ಬೀರದೇವ, ಇಟ್ಟಪ್ಪ, ಮಾಳಿಂಗರಾಯ,ಮೈಲಾರ, ಎಲ್ಲಮ್ಮ ಮುಂತಾದ ದೈವಗಳನ್ನು ಆರಾಧಿಸುವರು. ಗಡಿ ಭಾಗದಲ್ಲಿ ಮರಾಠಿಯೊಂದಿಗೆ ಕನ್ನಡ ಬಳಸುವರು. ಇವರಲ್ಲಿ ಬನ್ನೀ, ಬೋರಗೊಂಡೆ, ಚಂಡಿಕೆ, ಡೋಣೆ, ಗವಂಡೇ, ಝುಂಡೆ,

*Corresponding Author: ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ

ಕೊಳಸೆ, ಲಟ್ಟೆ, ಲಾಂಡೆ, ಸೆಂಡಿಗೆ,ಯಮಗಾರ, ಮುಂತಾದ ಬೆಡಗುಗಳಿವೆ.(ಅಲೆಮಾರಿ ಕುರುಬರ ಅಭಿವೃದ್ಧಿ ಸಂಘ. ನೋಂದಣಿ ಆಗಿದೆ. ಸೌಂದಲಗಾ ..ಚಿಕ್ಕೋಡಿ ತಾಲೂಕು ಬೆಳಗಾವಿ ಜಿಲ್ಲೆ)

ಕಾಡುಗೊಲ್ಲ: ಅಡವಿಗೋಲ್ಲ, ಹಟ್ಟಿಗೊಲ್ಲ, ಕಾಡುಗೊಲ್ಲ ಎಂಬ ಹೆಸರುಗಳಿಂದ ಗುರುತಿಸಲಾಗುವ ಇವರು ಊರಿನಿಂದ ಊರಿಗೆ ಪ್ರತ್ಯೇಕ ಹಟ್ಟಿಗಳಲ್ಲಿ ದೂರವಾಗಿ ವಾಸಿಸುತ್ತಾರೆ.ಇವರಲ್ಲಿ ಚಿತ್ರದೇವರು, ಜುಂಜಪ್ಪ ದೇವರು, ಯತ್ತಪ್ಪ ದೇವರು, ಮಾರಮ್ಮ ದೇವರು ಎಂಬ ಮನೆ ದೈವಗಳಿವೆ.

ಅಲಗು, ಬನವಾಸಿ, ಗಣೇ, ಕೊಲ್ಲ ಕಡಗ, ಜಾಗಟೆ, ಕಂಬಳಿ ಎಂಬ ಕುರುಹಗಳಿವೆ. ಚಿತ್ತಮುತ್ತಿ, ಚಂದ ಮುತ್ತಿ, ರಾಮೇಗೌಡ ಎಂಬ ಕುಲ ಪ್ರಭೇದಗಳಿವೆ. ಕರಡಿ ಗೊಲ್ಲರು, ಸನ್ನರು, ಅಜ್ಜಿಯವರು, ಸೋಮ ನವರು, ಯಗಡಿನವರು, ಅರೇನವರು, ಮೇರಿನವರು, ಬೆಳ್ಳೂರನವರು ಎಂಬ ಇತ್ಯಾದಿ ಪಂಗಡಗಳಿವೆ. ಇವರು ತುಮಕೂರು ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಇವರ ಭಾಷೆ ಮಾತ್ರ ಕನ್ನಡವಾಗಿರುತ್ತದೆ. ಇವರಲ್ಲಿ ಇತ್ತೀಚಿಗೆ ಸಂಘಟನೆಯಾಗಿ (ಕರ್ನಾಟಕ ರಾಜ್ಯ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘ,ಚೇತನ ನಿಲಯ, ಜೆ ಸಿ ಆರ್ ಬಡಾವಣೆ, ಚಿತ್ರದುರ್ಗ) ಸಂಘ ಸ್ಥಾಪಿಸಿದ್ದಾರೆ.

ಬುಡ್ಗಜಂಗಮ: ಪರಿಶಿಷ್ಟ ಜಾತಿಯ ಬುಡ್ಗಜಂಮರು ಆಂಧ್ರದ ಮೂಲದವರಾಗಿದ್ದು ಕರ್ನಾಟಕ ಮಹಾರಾಷ್ಟ್ರ ಆಂಧ್ರಗಳಲ್ಲಿ ಲಕ್ಷಾಂತರ ಜನರು ವಾಸವಾಗಿದ್ದಾರೆ. ಇವರನ್ನು ಬಹುರೂಪಿ, ಬಾಳಸಂತ, ಭಾವಚಾ, ಬಾವಾಜಿ, ಭೈರಾಯಿಗಳು, ಬೇಡ ಜಂಗಮ, ಬುರ್ರ ಕಡಥೆಯವರು, ಜಗ್ಗಲಿ, ಜಂಗಾಲರು, ಕುರು ಕುರು ಮಾಮ, ಕೊಂಡ ಮಾಮ, ಸನ್ಯಾಸಿ, ಸಿದ್ದರು ವೇಷಗಾರರು ಇಂತಹ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರಲ್ಲಿ ಅಂದೋಳ್ಳು, ಅಶ್ವ, ಬಲಗೊಳು, ಸಂಕುಲ, ತಾಟಿಕೊಂಡ, ಎಡವಲಿ ಎಂಬ ಬೆಡಗುಗಳಿವೆ. ಇವರು ಮನೆಯಲ್ಲಿ ತೆಲುಗು ಭಾಷೆಯನ್ನು ಮಾತನಾಡಿದರೂ ಮರುಗು ಭಾಷೆಯನ್ನು ರೂಡಿಸಿಕೊಂಡಿದ್ದಾರೆ.

ಜಂಜಲಮ್ಮ, ಸಂಕಲಮ್ಮ ದೈವಗಳನ್ನು ಆರಾಧಿಸುವರು. ಹಗಲು ವೇಷ ಮತ್ತು ಬರಕತೆ ಇವರ ಮುಖ್ಯ ಕುಲ ಪರಂಪರೆಯಾಗಿದೆ. ಕರ್ನಾಟಕದಲ್ಲಿ ಇತ್ತೀಚಿಗೆ ಸಂಘಟನೆಯಾಗುತ್ತಿದ್ದಾರೆ. ಕರ್ನಾಟಕ ರಾಜ್ಯ ಕರ್ನಾಟಕ ರಾಜ್ಯ ಬುಡ್ಗ ಜಂಗಮ ಕ್ಷೇಮಾಭಿವೃದ್ಧಿ ಸಂಘ ಸಂಘಟಿಸಿದ್ದಾರೆ ಇದು ಹೊಸದಡಿ. ರಾಮನಗರ ಜಿಲ್ಲೆ ಯಲ್ಲಿ ನೋಂದಣಿಯಾಗಿದೆ.

ಅಲೆಮಾರಿ ಸಮುದಾಯಗಳಲ್ಲಿ ಕನ್ನಡ ನೆಲದ ಜಾನಪದ ಸಂಸ್ಕೃತಿಯನ್ನು ಪ್ರಾಚೀನಕಾಲದಲ್ಲಿಯೇ ಅಂತರಾಷ್ಟ್ರೀಯ ಮನ್ನಣೆ ಪಡೆದು ಜಾಹೀರಾತಗೊಂಡು ನಂಬಿಕೆ ಉಳಿಸಿಕೊಂಡು ತಮ್ಮದೇ ಆದ ಗುರುತುಗಳನ್ನು ಸಾರಿದ್ದಾವೇ. ಅದರಲ್ಲೂ ವಿಶೇಷವಾಗಿ ತಗಲು ಗೊಂಬಿ ಕಲೆ ಸಮುದಾಯ ಕೇಂದ್ರಿತವಾಗಿದೆ ಅಂದರೆ ಜಾತಿ ಕೇಂದ್ರತವಾದ ಈ ಅಲೆಮಾರಿ ಕಲೆ ತಮ್ಮ ಸ್ವತಂತ್ರ ಸೃಷ್ಟಿಯಾಗಿ ರೂಪಿಸಿಕೊಂಡಿರುವ ಶಿಲೆಕ್ಯಾತರು ಜೀವ ವಾಹಿನಿಯಾಗಿಸಿಕೊಂಡು ಬಂದಿರುತ್ತಾರೆ. ಅಲೆಮಾರಿಗಳು ತಮ್ಮ ಬದುಕಿನ ಭಾಗವಾದ ಬೇಟೆ ಸಂಪ್ರದಾಯದಲ್ಲಿ ದೊರೆತ ಸಾಮಗ್ರಿ ತೊಗಲನ್ನು ಹದ ಮಾಡಿ ಒಣಗಿಸಿ,, ತಮಗೆ ಬೇಕಾದಂತೆ ಕತ್ತರಿಸಿ, ನುಣಪಾಗಿಸಿ ಚಿತ್ರ ರಚಿಸಿ, ಬಣ್ಣ ಬಳಿದು ಒಣಗಿಸಿ, ನೆರಳಲ್ಲಿಯೇ ಮಾಗಿಸಿ ಮಾಯಾಲೋಕದ ಆಕರ್ಷಣೆಯಾದದ್ದು ಆಶ್ಚರ್ಯಕರ. ತೊಗಲಿನೊಂದಿಗೆ ಜೀವ ಸಾಗಿಸುವ ಕೆಲವು ಸಮುದಾಯಗಳಲ್ಲಿ ಸಿಳ್ಳೇ ಕ್ಯಾತರು ಕಿಳ್ಳೇಕ್ಯಾತರು

ಅಪರೂಪದ ಅಲೆಮಾರಿಗಳಾಗಿದ್ದಾರೆ.

ಊರಿಂದ ಊರಿಗೆ ತಮ್ಮ ಪರಿಕರಗಳನ್ನು ಕಟ್ಟಿಕೊಂಡು ಧನಕರಗಳ ಮೇಲೆ ಸಾಗಾಟ ಮಾಡಿ, ಜಾನಪದರ ಮನರಂಜನೆಯನ್ನು ಮುಖ್ಯವಾಗಿಸಿ, ಸಾಹಿತ್ಯ ಸೃಷ್ಟಿ, ಸಂಗೀತ ತಾಳ -ಮೇಳ ವಾದ್ಯ ಪರಿಕರ, ಮೇಳ-ಹಿಮ್ಮೇಳವೆಂದು ಜಾನಪದ ಸಂಗೀತದ ಒಘದೊಂದಿಗೆ ಪ್ರದರ್ಶಿಸುವ ಅವರ ತೊಗಲುಗೊಂಬೆಯ ಪ್ರದರ್ಶನ ಸಾವಿರಾರು ವರ್ಷಗಳ ಕಾಲ ತನ್ನ ಬೌದ್ಧಿಕ ಪರಂಪರೆಯನ್ನು ಉಳಿಸಿಕೊಂಡಿರುತ್ತದೆ. 11ನೇ ಶತಮಾನದ ನೇಮಿಚಂದ್ರನ ನೇಮಿನಾಥ ಪುರಾಣದಲ್ಲಿ ಇದರ ಉಲ್ಲೇಖಗಳು ದೊರೆಯುತ್ತವೆ. 12ನೆಯ ಶತಮಾನದ ಶಿವಶರಣರ ವಚನಗಳಲ್ಲಿ ಕಾಯಕ ಜೀವಿಗಳ ದರ್ಶನವಿದೆ. ಅದರಲ್ಲೂ ಕಲಿಕೇತ ಬೊಮ್ಮಯ್ಯನಂತಹ

ತಿಥಿಯ ದಿನದಂದು ಸಾಮಾನ್ಯ ವೆಂಬಂತೆ ಬಂಧುಗಳಿಗೆ ಶಿಂದಿ-ಸರಾಯಿಯನ್ನು ಸೂತಕ ಕಳೆಯುವ ನೆಪದಲ್ಲಿ ಪವಿತ್ರವೆಂದು ಒಪ್ಪಿಕೊಂಡಿರುವ ಜೀವನ ವಿಧಾನಗಳಿವೆ.,ಕಲಾಪರಂಪರೆಯಲ್ಲಿ ಜಾನಪದ ಸಾಹಿತ್ಯವನ್ನು ಆಶುಕವಿತ್ವದ ರೂಪದಲ್ಲಿ ಸಂವಾದ ಮೂಲಕ ಸಾಗಿಸುವ ಪರಿ ಅತ್ಯಾಕರ್ಷಕವಾಗಿರುತ್ತದೆ. ನಮ್ಮ ಮಧ್ಯದಲ್ಲಿ ಇಂತಹ ಅನೇಕ ತಳ ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಕ ಆಕರ ಸಂಪತ್ತನ್ನು ತಮ್ಮ ಒಡಲಲ್ಲಿ ಇಟ್ಟುಕೊಂಡು ಕನ್ನಡ ನಾಡಿನ ಸಂಸ್ಕೃತಿ ಸಮೀಕ್ಷೆಕ್ಕೆ ಪ್ರಸಿದ್ಧಿಯಾಗಿದ್ದಾವೆ. ಇವುಗಳನ್ನು ನಮ್ಮ ಹೊಸ ಸಂಶೋಧನೆಯ ಪೀಳಿಗೆ ಕಣ್ತೆರೆದು ನೋಡುವುದು ಅಗತ್ಯವಿದೆ. ಇದರಂತೆ ಇರುವ ಕೆಲವು ಸಮುದಾಯಗಳನ್ನು ಉದಾಹರಿಸುವುದಾದರೆ,

ಪಾರ್ದಿ ಪರಿಶಿಷ್ಟ ಪಂಗಡದ ಬುಡಕಟ್ಟಿನವರಾದ ಇವರು ಗುಜರಾತ ರಾಜಸ್ಥಾನ ಮೂಲದವರೆಂದು ಗುರುತಿಸಲಾಗಿದೆ ಇವರನ್ನು ಅಡವಿ ಚಂಚರು, ಬಾಬುರೆ, ಚಿಗರಿ ಬೇಟೆಗಾರ, ಗಾಯಪಾರದೀ, ಹರಣಿ ಶಿಖಾರ, ಹಕ್ಕಿಪಿಕ್ಕಿ, ಮೇಲ್ ಶಿಕಾರೆ ನಕ್ಕಲ್ ನೀಲ್ ಶಿಕಾರಿ, ಪಾಂಶಿಪಾರ್ದಿ, ಇತ್ಯಾದಿ ಹೆಸರುಗಳಿಂದ ಗುರುತಿಸಲಾಗಿದೆ. ಇವರಲ್ಲಿ ಸಾವಂತಿಯ, ಪಿಂಪಳಾಚ, ಕೋಡಿಯಾರ್,ಕೊರಿಯ,ಆರ್ಖತಿಯ, ಈಖೋತಿಯಾ ಎಂಬ ಬಡುಗುಗಳಿವೆ. ರೂಪು, ಟಿಲ್ಲು ಛತ್ರಪತಿ, ಕಣ್ ಮೋಲೆಯ, ಭಾಗವಾನ್ ಹವಳೋ ಪಗಲೋ ಬಾಲಣ್ಣ ಇವರು ಪಾರ್ಥಿ ಸಮಾಜದ ಸಾಂಸ್ಕೃತಿಕ ನಾಯಕ ರಾಗಿದ್ದಾರೆ.ಖುದಾ,ಪಾರ್ದಾನ್ ದೇವಿ, ತುಳಜಾಭವಾನಿ, ಸಿಂಪಲಾರ ದೇವಿ,ಮುಹುರಚ್, ಇತ್ಯಾದಿ ದೈವಗಳನ್ನು ಆರಾಧಿಸುವರು. ಸಹಸ್ರಾರು ಸಂಖ್ಯೆಯಲ್ಲಿ ಇವರು ಕರ್ನಾಟಕದಲ್ಲಿ ಹರಡಿಕೊಂಡಿದ್ದಾರೆ

ಬೇಟೆ ಸಂಪ್ರದಾಯದಿಂದ ಈಗ ಬಿಕ್ಷಾಟನೆ ಸಂಪ್ರದಾಯಕ್ಕೆ ಇಳಿದಿದ್ದಾರೆ. ಇವರಲ್ಲಿ ಸಂಘಟನೆ ಆರಂಭಗೊಂಡಿದೆ ಬಳ್ಳಾರಿ ಜಿಲ್ಲೆ ಹಕ್ಕಿಪಿಕ್ಕಿ ಜನಾಂಗದ ಅಭಿವೃದ್ಧಿ ಸಂಘ ಸ್ಥಾಪನೆಯಾಗಿ ಕಂಪ್ಲಿ, ಹೊಸಪೇಟೆ ತಾಲೂಕ ಬಳ್ಳಾರಿ ಜಿಲ್ಲೆ.

ಹಕ್ಕಿಪಿಕ್ಕಿ ಇದು ಪಾರ್ದಿ ಸಮುದಾಯದ ಭಾಗವಾದರು, ಕರ್ನಾಟಕದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ಸಮುದಾಯವಾಗಿದೆ. ಗುಜರಾತ್ ಮೂಲದವರು ವಾಗರೇ ಇವರ ಮಾತ್ರ ಭಾಷೆ. ಇವರಲ್ಲಿ ಮೋಟೋ ಮತ್ತು ನನ್ನು ಎಂಬ ಎರಡು ಬಗೆಗಳಲ್ಲಿ ಗುಜರಾತ್ಯೋ ಕಾಳಿವಾಳು, ಅಮಾವಾಡೊ ಮತ್ತು ಪವಾರ್ ಎಂಬ ಒಳಪಂಗಡಗಳು ಕಂಡುಬರುತ್ತವೆ. ಇವರಲ್ಲಿ ಅಕ್ಕಪಾಳ, ಭಾವಂದಿ, ಚಾಂದಡಿ, ಚಾಮುಂಡಿ, ದಾದಾಜಿ, ದುಗಾವ್ ದುರ್ಗಾ, ಈಕಳಿ ಇಂಗಳರಾಜ್ ಹನುಮತ, ಕಾಳಕಾ,ಖಖತ್,ಮಮ್ಮಯ,ಘಳನಾರ್,ರಾವುಂಡಿ,ಶಿಕೊತರ್,ಶೇಶ್, ವಾಗಯ್, ಎಲ್ಲಮ್ಮ ಮುಂತಾದ ದೈವಗಳನ್ನು ಆರಾಧಿಸುವರು. ಸಹಸ್ರಾರು ಸಂಖ್ಯೆಯಲ್ಲಿ ಇರುವ ದಕ್ಷಿಣ ಕರ್ನಾಟಕದಲ್ಲಿ ವಿಸ್ತರಿಸಿಕೊಂಡಿರುವ ಇವರು ಕರ್ನಾಟಕ

ದಲ್ಲಿ ಒಂದು ಸಂಘ ಕಟ್ಟಿಕೊಂಡಿದ್ದಾರೆ ಹಕ್ಕಿಪಿಕ್ಕಿ ಕ್ಯಾಂಪ್ ಚಿಕ್ಕಮರಡಿ ಹಸುಡಿ ಅಂಚೆ ಶಿವಮೊಗ್ಗ ಜಿಲ್ಲೆ ವಿಳಾಸವಿದೆ.

## References


1. ಉಪಸಂಸ್ಕೃತಿ ಮಾಲೆ ಗೊಂಬೆ ರಾಮರ ಸಂಸ್ಕೃತಿ ಟೊ.ಗೋವಿಂದರಾಜ
2. ಸುಡುಗಾಡ ಸಿದ್ದರು ಒಂದು ಅಧ್ಯಯನ ಡಾ. ಟಿ ಎಂ ಭಾಸ್ಕರ್
3. ಸಿಳ್ಳೆಕ್ಯಾತರು ಒಂದು ಜಾನಪದೀಯ ಅಧ್ಯಯನ ಡಾ.ಸಣ್ಣವೀರಣ್ಣ ದೊಡ್ಡಮನಿ
4. ವೇಷಗಾರರು ಒಂದು ಅಧ್ಯಯನ ಡಾ. ಎಂ ಬಿ ಹೊಸಮನಿ
5. ದಲಿತರು ಮತ್ತು ಜಾಗತೀಕರಣ, ಡಾ.ಮೊಗಳ್ಳಿ ಗಣೇಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯.
6. ದಲಿತ ಚಿಂತನೆ, (ಸಂ)ಡಾ.ಮೊಗಳ್ಳಿ ಗಣೇಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦.
7. ದಲಿತ ಮಾರ್ಗ, (ಸಂ)ಡಾ.ಅರವಿಂದ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.
8. ದಲಿತ ಚಳುವಳಿ: ಒಂದು ಅವಲೋಕನ, ಡಾ. ವಿ. ಮುನಿವೆಂಕಟಪ್ಪ, ವಿಚಾರವಾದಿ ಪ್ರಕಾಶನ ಮೈಸೂರು, ೧೯೯೮.
9. ದಲಿತಜ್ಞ, ಡಾ.ಅರ್ಜುನ ಗೋಳಸಂಗಿ, ದಲಿತ ಸಾಹಿತ್ಯ ಪರಿಷತ್ತು, ಗದಗ, ೭೦೦೦.
10. ಬಂಡಾಯ, ದಲಿತ ಸಾಹಿತ್ಯ, ಡಾ. ಪುರುಷೋತ್ತಮ ಬಿಳಿಮಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.
11. ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಡಾ. ಅರವಿಂದ ಮಾಲಗತ್ತಿ, ಚೇತನ ಬುಕ್ ಹೌಸ್, ಮೈಸೂರು. ೧೯೯೯,